



ಲಡಾಕಿನ ಒಂದು ತೊರೆ


ಯಾಕ್‌ಗಾಹಿ


ಮಂತ್ರದ ಸಿಲಿಂಡರ್

ಲಡಾಕಿನ ರಾಜಧಾನಿ ಲೇಹ್ ನಗರ ಸಮುದ್ರ ಮಟ್ಟದಿಂದ 12 ಸಾವಿರ ಅಡಿ ಎತ್ತರದಲ್ಲಿದೆ. ಮಹಾನಗರವಲ್ಲ. ಕಾರ್ಖಾನೆಗಳಿಲ್ಲ. ಹೆಚ್ಚು ವಾಹನಗಳಿಲ್ಲ. ಶುದ್ಧ ವಾತಾವರಣ. ನುಬ್ರಾ ಕಣಿವೆ ಮತ್ತು ಪ್ಯಾಂಗ್ಯಾಂಗ್ ಸರೋವರದಲ್ಲಿ ಇನ್ನೂ ಶುದ್ಧ. ಅಲ್ಲಿ ಆಗಸದಲ್ಲಿ ಮೂಡುವ ಹಾಲುಹಾದಿಯನ್ನು ನೋಡಬಹುದು. ಆದರೆ ಈ ಪರಿಶುದ್ಧ ಹವೆಯಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆ. ಇದೊಂದು ಪ್ರಾಣಾಂತಿಕ ಶುದ್ಧತೆ. ಸಮುದ್ರದಲ್ಲಿ ಯಾನಿಗಳಿಗೆ ಮೊದಲ ದಿನ ಸೀ ಸಿಕ್‌ನೆಸ್ ಬರುವಂತೆ ಲಡಾಕಿನಲ್ಲಿ ಮೌಂಟೈನ್ ಸಿಕ್‌ನೆಸ್ ಅಡರುತ್ತದೆ. ವಿಪರೀತ ವಾತಾವರಣದ ಜತೆ ದೇಹ, ಮನಸ್ಸು ಹೊಂದಾಣಿಕೆಯಾಗದೆ ತಿರುಗಾಟ ಸಾಧ್ಯವಿಲ್ಲ. ನೂರು ಪ್ರವಾಸಿಗಳಲ್ಲಿ ಹತ್ತು ಜನ ಉಸಿರಾಟದ ಬಿಕ್ಕಟ್ಟಿಗೆ ಈಡಾಗುವರು. ಎಂತಲೇ ಲಡಾಕ್ ಪ್ರವಾಸವು ಸಿಕ್ಕಿಂ ಕಾಶ್ಮೀರಕ್ಕಿಂತ ಕಡಿಮೆ ಜನಪ್ರಿಯ. ಕಾಶ್ಮೀರದಲ್ಲೂ ಚಳಿಯಿದೆ. ಹಿಮಪಾತವಾಗುತ್ತದೆ. ಆದರೆ ಉಸಿರಾಟದ ಕಷ್ಟ ಕಡಿಮೆ.

ನಾನು ಬಾನು ವಿಮಾನದಿಂದ ಲೇಹ್ ಏರ್‌ಪೋರ್ಟಿನಲ್ಲಿ ಇಳಿದೊಡನೆ ಉಸಿರಾಟದ ಕಷ್ಟ ಕಾಣಿಸಿತು. ಬ್ಯಾಗೇಜನ್ನು ಸಂಗ್ರಹಿಸಿಕೊಂಡು ಏರ್‌ಪೋರ್ಟಿನ ಹೊರಗೆ ಬರುವ ಅರ್ಧ ತಾಸಿನೊಳಗೆ ನನ್ನ ದೇಹ ಹೊಂದಾಣಿಕೆಗೊಂಡಿತು. ಆದರೆ ಬಾನು ದೇಹ ಹೊಂದಿಕೊಳ್ಳಲಿಲ್ಲ. ತಲೆನೋವು ಶುರುವಾಯಿತು. ಹೋಟೆಲಿಗೆ ಬಂದೆವು. ಊಟ ಮಾಡಿದ ಬಳಿಕ ವಾಂತಿ ಮಾಡಿದಳು. ಕೂಡಲೇ ಲೇಹ್‌ನ ಸರ್ಕಾರಿ ಆಸ್ಪತ್ರೆಗೆ ಹೋದೆವು. ಉಸಿರಾಟದ ಸಮಸ್ಯೆ ಇರುವವರನ್ನು ಕ್ಯಾಸುವಲ್ಟಿ ವಿಭಾಗದಲ್ಲಿ ತಕ್ಷಣ ಸೇರಿಸಿಕೊಳ್ಳುವರು. ಆಸ್ಪತ್ರೆಯವರು ಅಡ್ಮಿಟ್ ಮಾಡಿಕೊಂಡು ಆಕ್ಸಿಜನ್ ಕೊಟ್ಟರು. ಬಗೆಬಗೆಯ ಡ್ರಿಪ್ ಹಾಕಿದರು. ವಾರ್ಡನ್ನು ಗಮನಿಸಿದೆ: ಅಲ್ಲಿ ಮೂರು ಬಗೆಯ ರೋಗಿಗಳಿದ್ದರು.

ಒಂದು; ಅದೇ ದಿನ ಬಂದಿಳಿದ ಪ್ರವಾಸಿಗರು. ಸಾಮಾನ್ಯವಾಗಿ ನವವಿವಾಹಿತರು ಮಧುಚಂದ್ರಕ್ಕೆ ಲಡಾಕನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ. ಕಾಶ್ಮೀರ ಅವರ ಆಯ್ಕೆ. ಆದರೆ ಪೆಹಲಗಾಂವ್ ದುರಂತದ ಬಳಿಕ ಪ್ರವಾಸಿಗರು ಲಡಾಕಿನತ್ತ ಮುಖ ಮಾಡಿದ್ದರು. ಸಂದಣಿ ವಿಪರೀತವಾಗಿತ್ತು. ರೋಗಿಗಳ ಸಂಖ್ಯೆಯೂ ಹೆಚ್ಚಾಗಿತ್ತು.

ಎರಡು; ಮೋಟಾರ್ ಬೈಸಿಕಲ್ ರೈಡಿಂಗಿನಲ್ಲಿ ಕೈಕಾಲು ಮುರಿದುಕೊಂಡವರು. ಲಡಾಕಿನ ಪ್ರಸಿದ್ಧ ಬೈಕ್ ರೈಡಿಂಗಿಗೆ ಧಾಡಸಿತನವುಳ್ಳ ಸಾಹಸ ಪ್ರವೃತ್ತಿಯ ಬೈಕ್ ಸವಾರರು ಧಾವಿಸುವರು. ಯೌವನದ ಕೆಚ್ಚು. ವೇಗದ ವ್ಯಸನ. ಹಿಮಾಲಯದ ತಿರುವು ರಸ್ತೆ. ಅಪಘಾತ ಸಾಮಾನ್ಯ.

ಮೂರು; ವಲಸೆ ಕೂಲಿಯಾಳುಗಳು. ಇವರು ಜಾರ್ಖಂಡ್ ಬಿಹಾರಗಳಿಂದ ಬಂದವರು. ಇವರ ಕೆಲಸ ಭೂಕುಸಿತವಾದಾಗ ರಸ್ತೆಯನ್ನು ಕ್ಲಿಯರ್ ಮಾಡುವುದು; ಕಟ್ಟಡ ಕಟ್ಟುವುದು. ರಕ್ಷಣಾ ಇಲಾಖೆಯ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶವಾದ ಲಡಾಕಿನಲ್ಲಿ ಚೀನಾದ ಜತೆ ಸಂಘರ್ಷವಾದ ಬಳಿಕ, ವಿಮಾನ ನಿಲ್ದಾಣ, ರಸ್ತೆ, ಸೇತುವೆ ಕೆಲಸ ಭರಾಟೆ ಪಡೆದಿದೆ. ಲಡಾಕಿನ ಜನಸಂಖ್ಯೆ ತೀರ ಕಡಿಮೆ. ಹೊರಗಿನಿಂದ ಬಂದ ಪ್ರವಾಸಿಗಳು ವ್ಯಾಪಾರಿಗಳು ಸೈನಿಕರೇ ಹೆಚ್ಚು. ರಸ್ತೆ ಕೆಲಸ ಮಾಡುವ ಕೂಲಿಯಾಳುಗಳು ಎಲ್ಲೆಡೆ ಕಾಣುತ್ತಿದ್ದರು. ಬಿಸಿಲಿಗೆ